ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2016-17ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ಲಭ್ಯವಿರುವ ಜಿಲ್ಲೆಯಿಂದ ಕೇಂದ್ರ ಸಹಾಯಧನವನ್ನು ಹಿಂಪಡೆದು ಅಗತ್ಯವಿರುವ ಜಿಲ್ಲೆಗಳಿಗೆ ವರ್ಗಾಯಿಸುವ ಕುರಿತು.

ಓದಲಾಗಿದೆ :
1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ ರವರ ಪತ್ರ ಸಂಖ್ಯೆ ಜಿಪಂ/ಅವಿ/ರಾಜೈಅಯೋ/ವಿವ-01/2016-17, ದಿನಾಂಕ 01.03.2017.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು ರವರ ಪತ್ರ ಸಂಖ್ಯೆ ತುಜಿಪ/ಅಭಿ/ ಜೈಅಯೋ/06/2016-17, ದಿನಾಂಕ 17.01.2017.
3. ದಿನಾಂಕ 22.02.2017ರಂದು ತಾಂತ್ರಿಕ ಸಿಬ್ಬಂದಿ ಸಮಿತಿ ಸಭೆಯಲ್ಲಿ ಚರ್ಚಿಸಿದಂತೆ.

**ಪ್ರಸ್ತಾವನೆ :**

ಮೇಲೆ ಓದಲಾದ (1)ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, **ಬೆಳಗಾವಿ** ರವರು **2014-15ನೇ** ಸಾಲಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ನಿರ್ಮಿಸಲಾದ **416** ಅನಿಲ ಸ್ಥಾವರಗಳಿಗೆ ಬಾಕಿ ಪಾವತಿಗಾಗಿ **ರೂ.45.34ಲಕ್ಷಗಳ** ಕೇಂದ್ರ ಸಹಾಯಧನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಓದಲಾದ (2)ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, **ತುಮಕೂರು** ರವರು **2016-17ನೇ** ಸಾಲಿನಲ್ಲಿ **ಡಿಸೆಂಬರ್ 2016ರ** ಅಂತ್ಯಕ್ಕೆ ನಿರ್ಮಿಸಲಾದ **95** ಜೈವಾನಿಲ ಘಟಕಗಳ ಪೈಕಿ **80** ಘಟಕಗಳಿಗೆ **ರೂ.10.51ಲಕ್ಷ** ಕೇಂದ್ರ ಸಹಾಯಧನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಇದರನ್ವಯ ಮೇಲೆ (3)ರಲ್ಲಿ ಓದಲಾದಂತೆ ಹಾಗೂ ದಾವಣಗೆರೆ ಜಿಲ್ಲೆಯ **ಫೆಬ್ರವರಿ 2017ರ** ಪ್ರಗತಿ ವರದಿಯನ್ವಯ ದಾವಣಗೆರೆ ಜಿಲ್ಲಾ ಪಂಚಾಯತಿಯಲ್ಲಿ **ರೂ.59.53ಲಕ್ಷ** ಕೇಂದ್ರ ಸಹಾಯಧನ ಬಾಕಿ ಇದೆ. ಈ ಅನುದಾನವನ್ನು ಕಾರ್ಯಕ್ರಮದ ಅನುಷ್ಠಾನದ ಹಿತದೃಷ್ಟಿಯಿಂದ ಉದ್ದೇಶಿತ ಯೋಜನೆಗೆ ವಿನಿಯೋಗಿಸುವ ನಿಟ್ಟಿನಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ ಮತ್ತು ತುಮಕೂರು ರವರು ಕೋರಿರುವಂತೆ ಅನುಕ್ರಮವಾಗಿ **ರೂ.45.34ಲಕ್ಷ** ಹಾಗೂ **ರೂ.10.51ಲಕ್ಷ** ಅಂದರೆ ಒಟ್ಟಾರೆ **ರೂ.55.85ಲಕ್ಷ** ಕೇಂದ್ರ ಸಹಾಯಧನವನ್ನು ದಾವಣಗೆರೆ ಜಿಲ್ಲಾ ಪಂಚಾಯತಿಯಿಂದ ಹಿಂಪಡೆದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ ಮತ್ತು ತುಮಕೂರು ರವರಿಗೆ ವರ್ಗಾಯಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/92/ಜೈಅಯೋ/2016 ಬೆಂಗಳೂರು, ದಿನಾಂಕ 13.03.2017.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ **2016-17ನೇ** ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದಡಿ ದಾವಣಗೆರೆ ಜಿಲ್ಲೆಯಲ್ಲಿ ಉದ್ದೇಶಿತ ಯೋಜನೆಗೆ ವೆಚ್ಚವಾಗದೇ ಬಾಕಿ ಉಳಿದಿರುವ ಕೇಂದ್ರ ಸಹಾಯಧನ **ರೂ.59.53ಲಕ್ಷಗಳ** ಪೈಕಿ **ರೂ.55.85ಲಕ್ಷ(ಐವತ್ತೈದು ಲಕ್ಷ ಎಂಬತ್ತೈದು ಸಾವಿರ ರೂಪಾಯಿಗಳು ಮಾತ್ರ)**ಗಳನ್ನು ಕೆಳಕಂಡ ಜಿಲ್ಲಾ ಪಂಚಾಯತಿಗಳಿಗೆ RTGS / ಡಿಡಿ ಮುಖೇನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ ಮತ್ತು ತುಮಕೂರು ರವರಿಗೆ ವರ್ಗಾಯಿಸುವಂತೆ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ | ಜಿಲ್ಲಾ ಪಂಚಾಯತ್ | ಲಭ್ಯವಿರುವ ಕೇಂದ್ರ ಸಹಾಯಧನ | ಹಿಂಪಡೆದ ಕೇಂದ್ರ ಸಹಾಯಧನ | ಹಿಂಪಡೆದ ಕೇಂದ್ರ ಅನುದಾನವನ್ನು ವರ್ಗಾಯಿಸಿದ ಜಿಲ್ಲೆ | | ವರ್ಗಾಯಿಸಿದ ಕೇಂದ್ರ ಸಹಾಯಧನ |
|---|---|---|---|---|---|---|
| 1 | ದಾವಣಗೆರೆ | 59.53 | 55.85 | 1 | ಬೆಳಗಾವಿ(*) | 45.34 |
| | | | | 2 | ತುಮಕೂರು | 10.51 |
| | **ಒಟ್ಟು** | ***59.53*** | ***55.85*** | | | ***55.85*** |

***(*) 2014-15ನೇ ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ಕೇಂದ್ರ ಸಹಾಯಧನವನ್ನು ಪಾವತಿಸುವುದು. ಇದರಿಂದಾಗಿ 2014-15ನೇ ಸಾಲಿಗೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯ ಸಹಾಯಧನ ಪಾವತಿಸಲು ಬಾಕಿ ಇರುವುದಿಲ್ಲ.***

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ದಾವಣಗೆರೆ ರವರು ಹಿಂಪಡೆದ ಅನುದಾನವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ ಮತ್ತು ತುಮಕೂರು ಜಿಲ್ಲೆಗಳಿಗೆ RTGS/DD ಮುಖೇನ ವರ್ಗಾಯಿಸುವುದು.

ಹಾಲಿ ವರ್ಗಾಯಿಸಲಾದ ಅನುದಾನವು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಹಾಗೂ ವ್ಯಪಗತ ಮಾಡತಕ್ಕದಲ್ಲ. ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಸದರಿ ಅನುದಾನವನ್ನು **ಗಾಂಧಿ ಸಾಕ್ಷಿ ಕಾಯಕದಡಿ** ಇಂಧೀಕರಿಸುವ ಷರತ್ತಿಗೆ ಒಳಪಟ್ಟು ಮರು ಹಂಚಿಕೆ ಮಾಡಿ ವರ್ಗಾಯಿಸಿದೆ.

ಕೇಂದ್ರ ಸರ್ಕಾರವು ತಿಳಿಸಿದಂತೆ ಸದರಿ ಅನುದಾನವನ್ನು **ಮಾರ್ಚ್ 2017ರೊಳಗೆ** ಉದ್ದೇಶಿತ ಯೋಜನೆಗೆ ವಿನಿಯೋಗಿಸಬೇಕಿರುವ ನಿಟ್ಟಿನಲ್ಲಿ ವರ್ಗಾಯಿಸಿದ ಹಾಗೂ ವರ್ಗಾಯಿಸಲ್ಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕೂಡಲೇ ಸೂಕ್ತ ಕ್ರಮಕೈಗೊಳ್ಳತಕ್ಕದ್ದು.

ಸದರಿ ಅನುದಾನವನ್ನು ಲೆಕ್ಕ ಶೀರ್ಷಿಕೆ **2810-60-196-6-01(ಯೋಜನೆ)** ರಡಿ ವೆಚ್ಚ ಭರಿಸಿ ಫಲಾನುಭವಿಗಳ ವಿವರಗಳೊಂದಿಗೆ ನಿಗದಿತ ನಮೂನೆಯಲ್ಲಿ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು ಜಿಲ್ಲಾ ಪಂಚಾಯತ್ ದಾವಣಗೆರೆ, ಬೆಳಗಾವಿ ಮತ್ತು ತುಮಕೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ.
4. ವಿಶೇಷಾಧಿಕಾರಿ, ಇಲಾಖಾ ಗಣಕ ಕೇಂದ್ರ, ಗ್ರಾಅಪ ಇಲಾಖೆ.
5. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ.